# ಬಿಸಿಲ ಬಾಗಿನ ಸಣ್ಣಕಥೆಗಳಲ್ಲಿ ಭೌಗೋಳಿಕ ಸನ್ನಿವೇಶಗಳು

**ಅಜಿತ್ ಪಾತ್ರೋಟ**
ಸಂಶೋಧನಾ ವಿದ್ಯಾರ್ಥಿ,
ಕನ್ನಡ ವಿಭಾಗ
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರಗಿ

**"The study of geography is about more than just memorizing places on a map. It's about understanding the complexity of our world, appreciating the diversity of cultures that exists across continents. And in the end, it's about using all that knowledge to help bridge divides and bring people together" - Barack Obama**

ಕರ್ನಾಟಕ ಹಲವು ಬಗೆಯ ಭೂಪ್ರದೇಶವನ್ನು ಹೊಂದಿದೆ, ಪ್ರದೇಶದಿಂದ ಪ್ರದೇಶಕ್ಕೆ ಆಗುವ ವ್ಯತ್ಯಾಸಗಳು ಜೀವಜಗತ್ತಿನ ಬದುಕಿನ ವೈವಿಧ್ಯತೆಗೂ ಕಾರಣವಗಿದೆ. ಒಂದು ಕಡೆ ಜೌಗು ಭೂಮಿಗಳು, ಇನ್ನೊಂದು ಕಡೆ ಒಣ ಭೂಮಿಗಳು, ಒಂದು ಕಡೆ ಅರಣ್ಯ ಪ್ರದೇಶಗಳು, ಇನ್ನೊಂದು ಕಡೆ ಅರೆಕಾಡುಗಳು, ಕರುಚಲು ಭೂಮಿಯಿಂದ ಕೂಡಿದೆ.ಇಂತಹ ಭೂ ಪ್ರದೇಶದಲ್ಲಿ "ಮಾನ್ಸೂನ ಮಾರುತಗಳನ್ನು ರೈತರ ಬದುಕಿನೊಂದಿಗಿನ ಆಡುವ ಜೂಜಾಟ ಎನ್ನುವ ವ್ಯಾಖ್ಯಾನವಿದೆ". ರೈತರ ಬದುಕು ಮತ್ತ ಕೃಷಿ ಆಧಾರಿತ ಚಟುವಟಿಕೆಗಳನ್ನು ನಿರ್ಧರಿಸುವುದು ಮಾನ್ಸೂನ ಮಾರುತಗಳು, ಈಶ್ಯಾನ್ಯ ಕರ್ನಾಟಕ ಬಾಗದ ಜನರು ಬದುಕಿನ ದಿಕ್ಕನ್ನು ಈ ಮಳೆಗಳು ನಿರ್ಧರಿಸುತ್ತವೆ. ಮಳೆಗಾಲ, ಚಳಿಗಾಲ, ಬೇಸಿಗೆಕಾಲ, ಯಾವುದು? ಯಾವಾಗ? ಆಗಬೇಕು, ಅನ್ನುವುದರ ಲೆಕ್ಕಾಚಾರ ಬದಲಾಗಿದ್ದಲ್ಲಿ ಕಾಲದಲ್ಲಿನ ವ್ಯತ್ಯಾಸಗಳು ಇಲ್ಲಿನ ಬದುಕಿನ ಏರುಪೇರುಗಳನ್ನು ಉಂಟುಮಾಡುತ್ತವೆ. ಈಶಾನ್ಯ ಕರ್ನಾಟಕ ಭಾಗದ ಸಾಹಿತ್ಯ ಅನುಭಾವಿಕ ಜನರು ಅವುಗಳನ್ನು ತಮ್ಮ ಕೃತಿಗಳಲ್ಲಿ ಪ್ರತಿಫಲಿಸಿದ್ದಾರೆ. ಅಂತವರಲ್ಲಿ ಈ ಕಾಲದ ಸೂಕ್ಷ್ಮ ಬರಹಗಾರಾದ ಕಲ್ಲಿಗಣನಾಥ ಗುಡದೂರು ಅವರು ಒಬ್ಬರು 'ಬಿಸಿಲ ಬಾಗಿನ' ಅನ್ನುವ ಎರಡು ದಶಕದ ಕತೆಗಳು ಒಂದಕ್ಕಿಂತ ಒಂದು ಕತೆ ಭಿನ್ನವಾದ ವಿಚಾರಗಳಲ್ಲಿ ಬಂದಿವೆ. ಮತ್ತು ನೆಲದ ಬದುಕನ್ನು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. ಈ ಕತಾ ಸಂಕಲನದಿಂದ ನಾಲ್ಕು ಸಣ್ಣಕತೆಗಳನ್ನು ವಿಮರ್ಶೆಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಮೊದಲನೆ ಕತೆ 'ಕೆರೆ'-ಮತಾಂತರ ಅನ್ನುವ ಕಥಾ ಸಂಕಲನದಿಂದ, ಎರಡನೆಯದು 'ಗಡಿ'-ಉಡಿಯಲ್ಲಿ ಉರಿ ಅನ್ನುವ ಕಥಾ ಸಂಕಲನದಿಂದ ಮತ್ತು ಮೂರನೆಯದು 'ಮಣ್ಣು-ಉಡಿಯಲ್ಲಿ ಉರಿ ಅನ್ನುವ ಕಥಾ ಸಂಕಲನದಿಂದ, ನಾಲ್ಕನೆಯದು 'ಮಳೆ'-ಮಾಮೂಲಿ ಗಾಂಧಿ ಅನ್ನುವ ಕಥಾ ಸಂಕಲದಿಂದ ಆರಿಸಲಾಗಿದೆ. ಈ ನಾಲ್ಕು ಕತೆಗಳ ವಿಬಿನ್ನ ಕಾಲಘಟ್ಟದಲ್ಲಿ ಬಿನ್ನ ಸನ್ನವೇಶಗಳಲ್ಲಿ ಕಾಣಿಸಿಕೊಳ್ಳುತ್ತವೆ. ಕೃಷಿ ಆದರಿಸಿ ದುಡಿಯುವವರ ಬದುಕು ಋತುಮಾನಗಳಿಗೆ ತಕ್ಕಂತೆ ಬದಲಾಗುವಿಕೆಯ ಚಹರೆಗಳು ಈ ಕಥಾ ಸಂಕಲನದಲ್ಲಿ ಹಿಡಿದಿಟ್ಟುಕೊಂಡಿದ್ದು.

ಕತೆಗಳು ಸುತ್ತಲಿನ ಬದುಕನ್ನು ಮಾತ್ರವಲ್ಲದೆ ನೆಲ, ನೀರು, ಬಿಸಿಲು, ಮಳೆ, ಗಾಳಿ, ಅವುಗಳು ಎಂತವು? ಮತ್ತು ಬದುಕಿನ ಮೇಲೆ ಅವುಗಳ ಪ್ರಭಾವ ಏನು? ಅನ್ನುವುದನ್ನು ಮಾತನಾಡುತ್ತವೆ. ಮನುಷ್ಯ ಯಾಂತ್ರಿಕ ಬದುಕು ಮತ್ತು ಕೈಗಾರಿಕೆಗಳು ಮಣ್ಣು, ಗಾಳಿ, ನೀರನ್ನು ಹೇಗೆ ವಿಷಮವಾಗಿ ಪರಿವರ್ತಿಸಿದೆ ಮತ್ತು ಅದರಿಂದಾಗುವ ಜೀವ ಹಾನಿ ಕುರಿತು ಸೂಕ್ಷ್ಮವಾಗಿ ಪರಿಚಯಿಸುತ್ತದೆ. ಒಂದು ಕಡೆಯಿಂದ ಇನ್ನೊಂದು ಕಡೆ ಗೂಳೆ ಹೋಗುವುದು ಮತ್ತು ಅಲ್ಲಿನ ಭೌಗೋಳಿಕ ಸನ್ನಿವೇಶಗಳಿಗೆ ತಕ್ಕಂತೆ ಬದುಕನ್ನು ಹೊಂದಿಸಿಕೊಳ್ಳುವುದು ಕಾಣಿಸುತ್ತದೆ. ಅಷ್ಟೆ ಅಲ್ಲದೆ ಹೈದರಾಬಾದ ಕರ್ನಾಟಕ ಭಾಗದ ಆಚರಣಾ ಲೋಕವು ಋತುಮಾನಗಳಿಗೆ ತಕ್ಕಂತೆ ಬದಲಾಗುವಿಕೆಯ ಮತ್ತು ಹಬ್ಬ ಹರಿದಿನಗಳಲ್ಲಿ ಅಲಂಕಾರಿಕ ಪದಾರ್ಥಗಳು, ತಿನ್ನುವ ಆಹಾರ, ಮತ್ತು ಉಡಿಗೆ ತೊಡುಗೆಗಳು ಬದಲಾಗುತ್ತವೆ. ಅಷ್ಟೆ ಅಲ್ಲದೆ ತಮ್ಮ ಸಾಕು ಪ್ರಾಣಿಗಳ ಕಾಳಜಿ ಕಾಲಕಾಲಕ್ಕೆ ಬಿನ್ನವಾಗಿ ಕಾಣಿಸುತ್ತದೆ. ಮಣ್ಣು, ಮಳೆ, ಬಿಸಿಲು ಇವೆಲ್ಲವು ಮನುಷ್ಯ ಮತ್ತು ಪ್ರಾಣಿಗಳ ಬದುಕಿನ ದಿಕ್ಕನ್ನು ಕಾಲಕಾಲಕ್ಕೆ ಬದಲಿಸುವ ಪರಿ ಈ ಕತೆಗಳಲ್ಲಿ ಕಾಣಸಿಗುತ್ತದೆ. ಇವೆಲ್ಲ ಕಾರಣಗಳಿಂದ ಇಲ್ಲಿನ ನೆಲಕ್ಕೆ, ನೀರಿಗೆ ಮತ್ತು ಬದುಕಿಗೆ ತುರ್ತಾಗಿ ಒದಗಿಸಬೇಕಾದ ಭದ್ರತೆಗಳೇನು? ಅನ್ನುವುದರ ಚಿಂತನೆಗೆ ಕತೆಗಳು ಮೌನ ಮುರಿದುಕೊಳ್ಳುತ್ತವೆ.

ಮಾನೋಮಿ ಹಬ್ಬಕ್ಕ ಎಲಿಯಾಗ 'ಸಿವಾ-ಸಿವಾ' ಅಂತ ಥಂಡಿ ಸುರುವಾಗಿ ಬಡುತ್ತ' ಸಗರಪ್ಪ ಕಟ್ಟೆ ಕೆಳಗ ಉರಿ ಕಾಸುತ್ತ ಕುಳಿತ ಶ್ಯಾಣಪ್ಪ ತನ್ನ ಎದುರಿಗೆ ತೊಡೆ ಮಟ ದೋತರ ಏರಿಸಿಗೆಂಡು ಕ್ಷಣಕ್ಕೊಮ್ಮೆ 'ಆ..ಹ್ಲೂ... ಅನ್ನುತ್ತಾ ಕುಳಿತ ಮಲ್ಲಪ್ಪಗ ಎಲ್ಲಾ ತಿರುಗು ಮುರುಗು ಆಗ್ಯಾವ. ಮಳಿಗಾಲ, ಚಳಿಗಾಲ, ಬ್ಯಾಸಗಿಕಾಲ ಎಲ್ಲಾ ಒಂದ ಆಗ್ಯಾವ. ವರ್ಷದ ಹನ್ನೆರಡು ತಿಂಗಳೂ ನಮ್ಮಡಿ ಬ್ಯಾಸಗಿ. ಉರಿಗೆ ಎರಡು ಅಂಗೈ ಹಿಡಿದ ಮಲ್ಲಪ್ಪ ಹೇಳಿದ. ಬಾರಕೇರ ಬಸಪ್ಪನ ದೊಡ್ಡ ಎತ್ತು ಲಚುಮ ಇವತ್ತು ಮಧ್ಯಾಹ್ನ ಸತ್ತೋತಿ. ಹಳ್ಳದ ಹೊಲಸು ನೀರು ಕುಡುದ ಸಲುವಾಗಿ ಸತ್ತು ಹೋಗ್ಯಾದಂತ ಚಿನ್ನೂರಿನ ಎಲ್ಲಾ ಗಟಾರಗಳ ನೀರು, ಮಲ್ಲಾಪುರದ ಸಾರಾಯಿ ಕಾರಖಾನೆ ಬಿಡೊ ಕೊಳಕು ನೀರು ಎಲ್ಲಾ ಹಳ್ಳಕ್ಕ ಸೇರುತ್ತ. ಅಂಥಾ ಹೊಲಸು ನೀರನ್ನ ಕುಡುದ್ರಲ್ಲ. ಮುಟ್ಟಿದ್ರೆ ಮುನ್ನೂರು ರೋಗ ರ್‍ತಾವ. ಮನ್ಸೇರಿಗೇ ಉಂಡ ಬಾಯಿ ವರೆಸಿಕೊಳ್ಳಾಕ ಒಳ್ಳೆ ನೀರು ಸಿಗಲರ್ದಂಗ ಆಗ್ಯೆತಿ. ಇನ್ನಾ ದನಕರುಗಳ ಗೋಳು ಕೇಳೋದ ಬ್ಯಾಡ...!' ಶಾಣಪ್ಪ ತಲಿಗೆ ಸುತ್ತಿಕೊಂಡಿದ್ದ ಕೆಂಪು ಬಣ್ಣದ ಮಾಸಿದ ಟವೆಲನ್ನ ಬಿಚ್ಚಿ ಜಾಡಿಸಿ ಹೆಗಲ ಮ್ಯಾಲ ಹಾಕ್ಕೆಂಡು ಹೇಳಿದ.೧

ಮಾಹಾನವಮಿ ಚಳಿಗಾಲದ ಪ್ರಾರಂಭ ಹಬ್ಬ ಈ 'ಕೆರೆ' ಕತೆಯು ಕಾಲವನ್ನು ಮತ್ತು ಹಬ್ಬವನ್ನು ಜೊತೆಯಾಗಿ ಸೂಚಿಸುತ್ತಿದೆ. ಈ ಕಾಲದಲ್ಲಿ ಉರಿ ಕಾಯಿಸುವುದು ಗುಂಪು ಗುಂಪಾಗಿ ಉರಿ ಸುತ್ತ ಕುಳಿತು ಮತುಕತೆಗಳು ಪ್ರಾರಂಭಿಸುವುದು ವರ್ಷದುದ್ದಕ್ಕ ನಡೆದ ಸಂಕಟಗಳನ್ನು ಸಂತಸಗಳನ್ನು ಹಂಚಿಕೊಳ್ಳವುದು ಕತೆ ವಿವರಿಸುತ್ತದೆ. ಅಲ್ಲದೆ ಕಾಲದ ಪಲ್ಲಟಗಳನ್ನು ಕತೆ ತಿಳಿಸುತ್ತಿದೆ. ಕಾಲ ಕಾಲಕ್ಕೆ ಆಗಬೇಕಾಗಿದ್ದು, ಆಗದೆ ವೈಪರಿತ್ಯಗಳು ಕಾಣಿಸುತ್ತಿವೆ. ಒಂದು ಕಡೆ ಕಾಲದಿಂದಾಗುವ ವೈಪರಿತ್ಯಗಳು ಇನ್ನೊಂದು ಕಡೆ ಮನುಷ್ಯ ನಿರ್ಮಿತ ವೈಪರಿತ್ಯಗಳು ಎರಡು ಏಕಕಾಲಕ್ಕೆ ಕಾಣಿಸಿವೆ. ಅಲ್ಲದೆ ಮನುಷ್ಯ ನಿರ್ಮಿತ ಕೈಗಾರಿಕೆಗಳಿಂದ ಜೀವಜಗತ್ತಿನ ಚಲನೆ ಏರು ಇಳುವುಗಳನ್ನು ಸೂಚಿಸುತ್ತಿದೆ. ಜೀವ ದ್ರವ್ಯವಾದ ನೀರು ಜೀವ ತೆಗೆಯುವ ವಿಷವಾಗಿ ಪರಿವರ್ತನೆಯಾಗಿದೆ. "ನೀರನ್ನ ಕುಡುದ್ರಲ್ಲ ಮುಟ್ಟಿದ್ರೆ ಮುನ್ನೂರು ರೋಗ ರ‍್ತಾವ" ಅನ್ನುವ ವ್ಯಾಕ್ಯಾನಗಳ ಮೂಲ ಹುಡುಕಿದರೆ ಕಾಲದೊಂದಿಗೆ ಬದುಕಿನ ಅನುಭವಗಳೊಂದಿಗೆ ನೀರಿನ ಕುರಿತು ವ್ಯಾಖ್ಯಾನಗಳು ಬದಲಾಗಿದ್ದು ತಿಳಿಸುತ್ತದೆ. ಕೆ.ವೈ.ನಾರಾಯಣ ಸ್ವಾಮಿಯವರ "ನೀರ ದೀವಿಗೆ" ಸಂಶೋಧನಾ ಗ್ರಂಥದಲ್ಲಿ ಗುರುತಿಸಿರುವ ಹಾಗೆ "ನೀರಿಗೆ ಮುನ್ನೂರು ರೋಗ ವಾಸಿ ಮಾಡುವ ಗುಣವಿದೆ"(ಟ್ರೈಪ್ಸ ಆಫ ವಾಟರ್ ಥೆರಫಿ) ಅನ್ನುವುದು ತಿಳಿಯುತ್ತದೆ. ಒಂದು ಕಾಲದಲ್ಲಿದ್ದ ನೀರಿನ ಮೌಲ್ಯಗಳು ಇನ್ನೊಂದು ಕಾಲಕ್ಕೆ ಬದುಕಿನ ಅನುಭವಗಳೊಂದಿಗೆ ಬದಲಾಗುವಿಕೆ ಚಹರೆಯನ್ನು ಗುರುತಿಸಲು ಇಲ್ಲಿ ಸಾಧ್ಯವಿದೆ.

ಬಸ್ ಸ್ಟ್ಯಾಂಡ್ ಕಡೇಲಿಂದ ನಾಲ್ಕಾರು ನಾಯಿಗಳು ಒಂದೇ ಸವನೇ ಒದರಾಕ ಸುರು ಮಾಡಿದವು.ಶ್ಯಾಣಪ್ಪ, ಮಲ್ಲಪ್ಪ ಏನೋ ಹೇಳಬೇಕೆಂದು ಬಾಯಿ ತೆರದ ನಾಯಿ ಒದರಿದ ಸದ್ದು ಕೇಳಿ ಹಂಗೆ ಬಾಯಿ ಮುಚ್ಚಕೊಂಡು ಬಸ್ ಸ್ಟ್ಯಾಂಡ್ ಕಡೆ ನೋಡಿದ. ಕತ್ತಲೆ ಕಂಬಳಿ ಕಟ್ಟಿದಂತೆ ಕಂಡಿತು. ಊರ ಹೊರಗಿನ ಕೇರಿಗಳಲ್ಲಿ ಮಿಂಚು ಹುಳುಗಳಂತೆ 'ಮಿಣಿಕ್ ಮಿಣಿಕ್' ಅಂತ ಮಿನುಗುತ್ತಿದ್ದ ದೀಪಗಳ ಬೆಳಕು ಬಿಟ್ಟರೆ ಬೇರೆ ಬೆಳಕು ಕಾಣಲಿಲ್ಲ ಊರೊಳಗೆ ಬರುತ್ತಿರುವವರು ಯಾರು ಅಂತ ಗೊತ್ತಾಗಲಿಲ್ಲ ೨

ಬಿಸಿಲಿನ ಪ್ರಮಾಣದ ಹಾಗೆ ಚಳಿಗಾಲದ ಸಂದರ್ಭಗಳಲ್ಲಿ ವಿಪರಿತ ಚಳಿಗಾಳಿಗಳು ಬಿಸುವುದು ಅದೆ ಸಂದರ್ಭಕ್ಕೆ ಸಾಕು ಪ್ರಾಣಿಗಳ ಗೋಳು ಚಳಿಗೆ ಪ್ರಾಣಿಗಳು ಒದರುವುದು, ಮಿಂಚುಹುಳುಗಳು ಕಾಣಿಸಿಗುತ್ತವೆ ಕಥೆಗಾರನ ಗ್ರಹಿಕೆ ಅನುಭವಗಳ ಸ್ಪರ್ಷ ಕತೆಯಲ್ಲಿ ಕಾಲದ ಸೂಕ್ಷ್ಮತೆಗಳನ್ನು ಹಿಡಿದಿಡುವಲ್ಲಿ ಯಶಸ್ವಿ ಆಗಿದೆ. ಸಮಕಾಲೀನ ಮನುಷ್ಯ ಬದುಕಿನ ವಾಸ್ತವಗಳನ್ನು ಮಾತ್ರ ನೇರವಾಗಿ ತರದೆ ಸುತ್ತಲಿರುವ ಪ್ರಾಣಿ ಪಕ್ಷಿಗಳನ್ನು ಗಮನಿಸುವುದು ಮತ್ತು

ಅವುಗಳ ಸಂವೇದನೆಗಳನ್ನು ಬರೆಯುವುದು ಈ ತಲೆಮಾರಿನ ಬರಹಗಾರರಿಗೆ ಕಷ್ಟಸಾಧ್ಯವಾಗಿದೆ. ಆದರೆ ಈ ಕತೆಗಾರ ಅವುಗಳನ್ನು ಹಿಡಿಯಬಲ್ಲ ಅನ್ನವುದು ಅಲ್ಲದೆ ತನ್ನ ಬದುಕಿನ ಸುತ್ತ ಭೌಗೋಳಿಕತೆಯನ್ನು ಸಮರ್ಥವಾಗಿ ಪ್ರತಿನಿಧಿಸಬಲ್ಲನೆಂಬುದು ತಿಳಿಯುತ್ತದೆ.

ಬಂಗರ್ದಂತಾ ಭೂಮ್ತಾಯನ್ನು ಮಾರಬಾರದಾಗಿತ್ತು...ಒಂಟಿಯಾಗಿರೋ ಶಿವನ ಜೊತೆಗೆ ಮತ್ತೊಂದು ಎತ್ತು ತಂದು ಯಾರದಾದ್ರು ಹೊಲ ಕೋರು ಮಾಡಬೇಕು. ಸಾಯೋತನಕ ಭೂಮಿ ತಾಯಿ ಸೇವಾ ಮಾಡಬೇಕು.. ಆಗೊಮ್ಮೆ ಈಗೊಮ್ಮೆ ಬಿಕ್ಕುತ್ತಲೇ ಕುಳಿತಿದ್ದ ಶ್ಯಾಣಪ್ಪನ ಕಣ್ಣ ಮುಂದೆ ಹತ್ತಾರು ಚಿತ್ರ ವಿಚಿತ್ರ ಘಟನೆಗಳು ರೆಕ್ಕೆ ಬಿಚ್ಚಿ ಹಾರಾಡತೊಡಗಿದವು.೩

ಮನುಷ್ಯರು ಕೃಷಿ ಪ್ರಾಂಭಿಕ ಕಾಲದಿಂದಲೂ ಭೂಮಿಯನ್ನು ತಾಯಿ ಸ್ವರೂಪವಾಗಿ ಕಂಡಿದ್ದಾರೆ. ಪ್ರಾಣಿಗಳನ್ನು ದೈವವಾಗಿ ಕಂಡಿದ್ದಾರೆ. ವೃತ್ತಿಯನ್ನು ಸೇವೆಯೆಂದು ಮಾಡಿದ್ದಾರೆ. ಅದು ಈ ಕತೆಯಲ್ಲಿ ಕಾಣಿಸುತ್ತಿದೆ.ಮನುಷ್ಯ ಬದುಕಿಗೆ ಹೆಗಲು ಕೊಟ್ಟ ಪ್ರಾಣಿಗಳು, ಆಹಾರ ನೀಡಿದ ಸಸ್ಯಗಳು, ನೆರಳು ನೀಡಿದ ಮರಗಳನ್ನು ಮತ್ತು ಕಲ್ಲು, ಮಣ್ಣು, ವಸ್ತು ವಿಚಾರಗಳನ್ನು ವಿಶೇಷವಾಗಿ ಕಂಡಿದ್ದು ಅವುಗಳೊಂದಿಗಿನ ಬಾಂದವ್ಯ ಭಾವನಾತ್ಮಕವಾದದ್ದು, ಕರುಳು ಬಳ್ಳಿಯಹಾಗೆ ಬೆಳದು ಬಂದಿದೆ ಆದರೆ ಕತೆಯಲ್ಲಿ ಅವುಗಳನ್ನು ಕಳೆದು ಕೊಳ್ಳುತ್ತಿರುವ ಶ್ಯಾಣಪ್ಪ ಅನ್ನುವ ಪಾತ್ರದ ಸಂಕಟಗಳು ತಾಯಿ ಮಗು ದೂರವಾದ ರೀತಿಯಲ್ಲಿ ಭೂಮಿ ಮತ್ತು ಅವನು, ಅವನು ಮತ್ತು ಪ್ರಾಣಿಗಳು ಕಳೆದು ಹೋದ ರೀತಿಯಲ್ಲಿ ಕಾಣಿಸುತ್ತಿವೆ.

'ಕುಡಿಯಾಕ ಅಲ್ಲ, ಔಷಧಕ್ಕ ಕೂಡಸಾಕ ಹನಿ ನೀರು ಉಳಿದಿಲ್ಲ... ಇವತ್ತು ಸಣ್ಣ ಕೊಡ ನೀರು ಮಾತ್ರ ಕೊಟ್ಟಾರ. ನಾಳಿಲಿಂದ ಊರಾಗಿನ ಮಂದಿಗಿ ಕೆರೆಯ ಹನಿ ನೀರು ಕೊಡಾಂಗಿಲ್ಲಂತ. ಉಚ್ಚೆ ಹೊಯ್ಕಂಡು ಕುಡೀರಿ ನಾವೇನು ಮಾಡಾಮು. ನಮ್ಮ ಬೆಳೆಗೆ ನೀರಿಲ್ಲ. ಬೆಳೆ ಬರೋ ತನಕ ಇನ್ನಾ ಒಂದ ತಿಂಗಳು ಯಾರಿಗೂ ನೀರು ಕೊಡಂಗಿಲ್ಲ'೪

'ಹೀಂಗಾದ್ರ ಇವ್ರಿಗಿ ಬುದ್ಧಿ ಬರಂಗಿಲ್ಲ' ಅಮರಯ್ಯ ತುಟಿಕಚ್ಚಿ ಹೇಳಿದ. 'ಬರಗಾಲ ಪರಿಹಾರದಾಗ ವರ್ಷದ ಹಿಂದೆ ಕೆರೆ ನಿಮಾರ್ಣ ಕಾಮಗಾರಿ ನಡೆದಿತ್ತು. ಕುಷ್ಟಗಿಯ ಸಣ್ಣ ನೀರಾವರಿ ಇಲಾಕೆ ಕೆರೆ ನಿರ್ಮಾಣಕ್ಕಂತ ೧೭ ಲಕ್ಷ ರೂಪಾಯಿ ಮಂಜೂರು ಮಾಡಿತ್ತು. ಸುತ್ತಮುತ್ತಲಿನ ನೂರಾರು ಕೂಲಿ ಕಾರ್ಮಿಕರಿಗೆ ಕೆಲಸ ಕೊಟ್ಟು ಕಾಮಗಾರಿ ನಡೆಸ್ಬಕು ಅಂಬುದು ಸರ್ಕಾರದ ಆದೇಶ ಇತ್ತು. ದೊಡ್ಡ ಮಶಿನ್ ತರಸಿ ಕೆರೆ ಕೆಲಸ ಮುಗಿಸಿದ್ರು. ಊರಿನ ಒಬ್ರಿಗೂ

ಒಂದ ದಿನ ಕೆಲಸ ಕೊಡಲಿಲ್ಲ. ತಾಲೂಕಿನ ಅಧಿಕಾರ ಅವ್ರ ಕೈಯಾಗ ಐತಿ ಅದಕ್ಕ ಹೀಂಗ ಹದ್ದು ಮೀರಿ ಮರೆಯಾಕ ಹಚ್ಯಾರ ಅಂದ.೫

ಕಾಲದ ಪಲ್ಲಟಗಳು ಮತ್ತು ಹಲವು ವರ್ಷಗಳು ಮಳೆ ಇಲ್ಲದೆ ಇರುವುದು ಮತ್ತು ಇರವು ನೀರಿನಲ್ಲಿ ಬದುಕು ಸಾಗಿಸುವ ಸಂದರ್ಭಗಳಲ್ಲಿ ವರ್ಗಗಳು ಸೃಷ್ಟಿ ಆಗಿರುವ ಸಾಧ್ಯತೆಗಳು ಇವೆ. ಆದರೆ ಇದು ಒಂದೆ ಕಾರಣಕ್ಕೆ ಅಲ್ಲ ಭೂಮಿ, ಖನಿಜ ಸಂಪತ್ತು, ಮತ್ತು ಇತರ ಭೊಗೋಳಿಕ ಸಂಪನ್ಮೂಲಗಳು ಹಂಚಿಕೆಯಲ್ಲಿ ವ್ಯತ್ಯಾಸಗಳಿವೆ. ಪಾರಂಪರಿಕವಾಗಿ ಕೃಷಿಗೆ ಯೋಗ್ಯವಾದ ಭೂಮಿ ಮತ್ತು ನೀರಿನ ಆಕರಗಳು ಉಳ್ಳವರ ಪಾಲಾಗಿದ್ದು, ಅವುಗಳ ಹಂಚಿಕೆ ಮತ್ತು ತರತಮತೆಗಳು ಹಿಂದಿನಿಂದಲೂ ಇವೆ. ನೈಸರ್ಗಿಕ ವಿಪತ್ತುಗಳು ಸೃಷ್ಟಿಸಿರುವ ಬಿಕರತೆ ಮನುಷ್ಯರಲ್ಲಿ ಮೃಗತ್ವವನ್ನು ಶ್ರೇಣಿಗಳನ್ನು ಕಾಪಿಟ್ಟುಕೊಂಡು ಬಂದಿವೆ. ಕೆರೆ ಕತೆ ಯಜಮಾನ್ಯದ ಮುಖಗಳನ್ನು ಈ ಸಂದರ್ಭಗಳಲ್ಲಿ ತೋರಿಸುತ್ತಿವೆ. ದಿನ ಬಳಕೆಯ ನೈಸರ್ಗಿಕ ಸಂಪತ್ತುಗಳು ಬರಿದಾದಂತೆ ಸಂಘರ್ಷಗಳು ಹೆಚ್ಚು ಏರ್ಪಡುತ್ತವೆ. ಕಡಿಮೆ ಪ್ರಮಾಣದ ನೀರು, ಆಹಾರ, ಇತರ ಸಂಪನ್ಮೂಲಗಳ ಶೇಖರಣೆ ಸಂಗ್ರಹ ಗುಣ ಇವುಗಳು ಮನುಷ್ಯರಲ್ಲಿನ ಮೃಗತ್ವವನ್ನು ಹೊರಗೆಳೆಯುತ್ತವೆ. ಇದು ಮನುಷ್ಯರಲ್ಲಿ ಮಾತ್ರವಲ್ಲದೆ ಪ್ರಾಣಿ ಸಹಜವಾದ ಗುಣಗಳನ್ನು ಡಾರ್ವಿನ ತನ್ನ ಜೀವ ವಿಕಾಸ ಸಿದ್ಧಾಂತದಲ್ಲಿ ಗುರ್ತಿಸಿದ್ದಾನೆ. ಈ ಕತೆಯ ನೀರಿನ ಸಂದರ್ಭದಲ್ಲಿ ಆಗುತ್ತಿರುವ ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಒದು ಕಡೆ ಸಂಪನ್ಮೂಲಗಳ ಕ್ರೋಢೀಕರಣ ಮತ್ತು ಅದರ ದುರ್ಬಳಕೆ ಇನ್ನೊಂದು ಕಡೆ ಸಾರ್ವಜನಿಕವಾಗಿರುವುದು ಸ್ವಂತಕ್ಕೆ ಬಳಸಿಕೊಳ್ಳುವುದು ಅದೆ ರೀತಿಯಾಗಿ ಕಾಣಿಸುತ್ತದೆ.

ಅವನ ಗಡ್ಡಕ್ಕ ಎಳ್ಳಿ ಹರ್ಲಿ. ಅವನು ಸಾಯುವಾಗ ಬಾಯಿಗ ಹಾಕಕ ಹನಿ ನೀರು ಸಿಗಲರ್ದಂಗ ಆಗ್ಲಿ. ನಮ್ಮ ಶಾಪ ನಿನಗ ತಟ್ಟಲರ್ದ ಬುಡಲಪೋ ಗೌಡ.೬

'ನೀರಿನ ಕಾಲಾಗ ಸಾಕಾಗಿ ಹೋಗ್ಯೆತಿ'೭

'ರ್ಲಿ ಸುಮ್ಕಿರವ್ವೋ... ಅವರಿಗೆಲ್ಲಾ ಕೆಟ್ಟ ಕಾಲ ಬಂದ್ಯೆತಿ ಅದಕ್ಕ ಹಂಗ ಉರಿಯಾಕ ಹತ್ಯಾರ'.

'ಸುಮ್ಕಿರವ್ವ. ನೀವೇನು ನೀರು ತರಾದು ಬ್ಯಾಡ...ನಾನ ಮಲ್ಲಿಕಾರ್ಜುನ ಕ್ಯಾಂಪಿಗೆ ಹೋಗಿ ನೀರು ರ್ತೀನಿ. ಎಷ್ಟು ದಿವಸ ಕೆರೆ ನೀರು ನಮಗ ಕೊಡಂಗಿಲ್ಲ ನೋಡಾಮು....'೮

ಭೀಕರ ಬರಗಾಲ ಒಂದು ಕಡೆಯಾದರೆ ಚಳಿಗಾಲದ ಪ್ರಾರಂಭಕಾಲವು ಇದಾಗಿದೆ. ಇಲ್ಲಿ ಒಂದು ಕಡೆ ನೀರು ಕುಡಿಯಲು ಸಿಗದೆ ಇರವುದು ಮತ್ತು ಇನ್ನೊಂದು ಕಡೆ ಕೆರೆ ನೀರು ಉಳ್ಳವರ ಹೊಲಗಳಿಗೆ ಮಾತ್ರವೆ ಬಳಕೆಯಾಗಬೇಕು ಅನ್ನುವ ರಾಜಕಾರಣ. ಈ ವೈಪರಿತ್ಯಗಳ ನಡುವೆ ಇನ್ನೊಂದು ಕಡೆ ಜನಸಾಮಾನ್ಯರ ಬದುಕು. ಅವರ ನಡುವೆ ಪ್ರಾಣಿಗಳು ಮೇವು ನೀರು ಇಲ್ಲದೆ ಒದ್ದಾಡುವುದು. ಇವುಗಳ ಹಿಂದೆ ಮನುಷ್ಯ ನಿರ್ಮಿತ ಸಮಸ್ಯೆಗಳು ಇವೆ ಮತ್ತು ಭೌಗೋಳಿಕ ಬದಲಾದ ಸನ್ನಿವೇಶಗಳು ಇವೆ. ಇಲ್ಲಿ ಕಾಣಿಸುವ ಬೈಗುಳಗಳು, ಶಾಪಗಳ ಹಿಂದೆ ಇರುವ ಸಂಕಟಗಳನ್ನು ಕತೆ ತೋರುತ್ತಿದೆ. ಮನುಷ್ಯರು ಮಾನವಿಯವಾಗಿ ಸ್ಪಂದಿಸಿದ ಕಾಲಗಳು ಉರುಳಿ ಸಂಕಟಗಳಿಗೆ ದೂಡಲ್ಪಟ್ಟಾಗ ಉಂಟಾಗುವ ಮರುಗುತನ ಇಲ್ಲಿನ ಕತೆಯಲ್ಲಿ ಇದೆ. ಎರಡು ರೀತಿ ದಾರಿಗಳು ಇವೆ ಒಂದು ಅದೆ ಕೆರೆ ಇಂದ ಹೇಗಾದರೂ ಮಾಡಿ ನೀರನ್ನು ಪಡೆಯಲೆಬೇಕು ಅನ್ನವುದು ಬಾರವಾದ ಮನಸ್ಥಿತಿ ಮತ್ತು ಇರುವ ಬಾರ ದಿಂದ ಜಾರಿಕೊಂಡು ಎಲ್ಲಿಯಾದರು ಹೋಗಿ ನೀರನ್ನು ತರಬೇಕು ಎನ್ನವುದು. ಇವೆರಡದರ ನಡುವೆ ಹೊಯ್ದಾಡುವ ಮನಸ್ಸಿನ ತಲ್ಲಣಗಳು ಕಾಣಿಸಿಕೊಂಡಿವೆ.

ಅದೇ ಆಗನ ಮಳೆ ನಿಂತಿತು. ಗಿಡದೊಳಗಿಂದ ಮಳೆ ಹನಿಗಳು ಗಾಳಿ ಬೀಸಿದಾಗೊಮ್ಮೆ 'ದಳ-ದಳ' ಉದುರುತ್ತಿದ್ದವು. ಮಳೆ ಬರುವ ಮುಂಚೆ ಇಡೀ ಊರೆಂಬ ಊರು ಮಂದಿ ಸಗರಪ್ಪಕಟ್ಟೆ ಸಮೀಪ ಸೇರಿ 'ಹಿರೆ ನಾಟಗ' ನೋಡಿದ್ರು. ಕತ್ತಲಾಯ್ತು.೯

ಮಳೆ ಬರೋದಷ್ಟ ಯಾಕ ಸೊಲಪು ಗಾಳಿ ಬೀಸ್ತೆಂದ್ರ...ಮಿಂಚು-ಗುಡುಗು ಸುರುವಾತೆಂದ್ರ 'ಕರೆಂಟ್ ಕಟಾಫ್' ಅಂತ ತಿಳಕಬೇಕು. ಸಣ್ಣ ಹಳ್ಳಿ ಕತ್ತಲೆಂಬೊ ಮಹಾ ತಾಯಿಯ ಕಪ್ಪಾನು ಸೀರಿ ಸೆರಗಿನಲ್ಲಿ ಮಿಂಚಿನ ಹುಳುಗಳು 'ಫಳ-ಫಳ' ಹೊಳದಂಗ ಕಾಣ್ತಿತ್ತು.೧೦

ಗಡಿ ಅನ್ನುವ ಕತೆಯ ಪ್ರಾರಂಭದಲ್ಲಿ ಮಳೆಗಾಲದ ಅನುಭವಗಳು ಇವೆ ಮಳೆಗಾಳಿಗಳು ಉಂಟುಮಡುತ್ತಿರುವ ಹಾನಿ ಮತ್ತು ಬದುಕಿ ಆಗುತ್ತಿರುವ ವಿಶಿಷ್ಟ ಅನುಭವಗಳು ಎಲ್ಲದರ ಜೊತೆ ನಾಟಕ ನೋಡುವುದು, ವಿದ್ಯುತ್ ಇಲ್ಲದೆ ಕತ್ತಲೆಯ ಅನುಭವಗಳು ಮತ್ತು ಕತೆಗಾರನ ಸ್ಮೃತಿಯ ಬಯಲುನಾಡಿನ ಮಿಂಚುಹುಳುಗಳು ನೆನಪುಗಳನ್ನೆ ಕತೆಗೆ ಕರೆದ್ಯೊಯುವ ಪರಿ ಪ್ರಾರಂಭದಲ್ಲಿ ಕಾಣಿಸುತ್ತದೆ. ಈ ಬಗೆಯ ಮಿಂಚುಹುಳುಗಳು ಈ ಪರಿಸರದಲ್ಲಿ ಮಳೆಗಾಲ ಮತ್ತು ಚಳಿಗಾಳದ ರಾತ್ರಿಗಳಲ್ಲಿ ಕಾಣಸಿಗುತ್ತವೆ. 'ಲ್ಯಾಂಪೆರಿಡೇ' ಎಂಬ ಕುಟುಂಬಕ್ಕೆ ಸೇರಿದ ಕೀಟಗಳಿವು ಆಹಾರಕ್ಕಾಗಿ, ಸಂಗಾತಿಗಳ ಆಕರ್ಷನೆಗಾಗಿ ಇವುಗಳು ಬೆಳಕನ್ನು ಹೊರಹಾಕುತ್ತವೆ. ಇವುಗಳ ಬೆಳಕಿಗೆ ಕಾರಣ 'ಆಕ್ಸಿಲ್ಯುಸಿಪೆರಿನ್'

ಎನ್ನುವ ರಾಸಾಯನಿಕ ಪ್ರಕ್ರಿಯೆ. ಸಾಮಾನ್ಯವಾಗಿ ಎಲ್ಲ ಕತೆಗಳಲ್ಲೂ ಈ ಹುಳುಗಳು ಇವೆ ಅಂದರೆ ಕತೆಗಾರನ ಸುತ್ತಲಿರುವ ಪರಿಸರದ ಸೂಕ್ಷ್ಮ ಗ್ರಹಿಕೆಯನ್ನು ಇದು ತಿಳಿಸುತ್ತದೆ.

'ಏ..ಫಕೀರಪ್ಪ... ಕಾವೇರಿ-ಆಲಮಟ್ಟಿ ಸಮಸ್ಯೆಗಳನ್ನ, ಕಾಶ್ಮೀರ ಗಡಿ ವಿವಾದನ್ನ ಬಗೆಹರಿಸಾಕಂತ ರಾಜ್ಯದ ಮುಖ್ಯಮಂತ್ರಿಗಳು... ದೇಶ-ವಿದೇಶದ ಪ್ರಧಾನಿಗಳು... ರಾಜಧಾನಿಯೊಳಗ ಅರಮನಿಯಂಥಾ ಬಿಲ್ಡಿಂಗ್‌ನೋಳಗ ತಣ್ಣಗ ಕುಂತ್ಗಂಡು ಬಗೆ ಹರಿಸುವಂಗ ನಿನ್ನ-ಭರತಪ್ಪನ ಪಿರ್ಯಾದಿ ಬಗೆಹರಿಸಾಕ ಅಮರೇಗೌಡರೇನು ಮುಖ್ಯಮಂತ್ರಿ-ಪ್ರಧಾನಿ ಮಂತ್ರಿಗಳೇನಪ..?'೧೧

ಲಾ ಪಾಯಿಂಟ್ ಅಂದ್ರ ಇದು ನೋಡಪ೧೨

'ಇನ್ನೊಮ್ಮೆ ನಿಮ್ ದನ-ಕರ ನಮ್ ಹೊಲದ ಒಡ್ಡಿನ ಸರಿಸಿ ಕಾಲಂದ್ಯ ಇಡ್ಲೇಳು ಕಾಲು ಕಡ್ದು ನಿಮ್ ಕೈಯಾಗ ಕೊಡ್ತೀನಿ೧೩

'ಭರತರಡ್ಡಪ್ಪನ ಐವತ್ತರ ಆಸು-ಪಾಸಿನ ಜೀವನದಲ್ಲೂ ಹದಿನೆಂಟರ ಹರಯ ಉಕ್ಕಿ ಬರುತ್ತಿತ್ತು. ನಾನೂ ಹೊಲಾ-ಮನಿ, ಹೇಂಣ್ತಿ-ಮಕ್ಕಳನ್ನ ಬುಟ್ಟು, ನಮ್ ನಿಯಂತ್ರಣ ರೇಖಾದಾಟಿ ಬಂದ ಅತಿಕ್ರಮಣಕಾರರ ಕತ್ತುಗಳಲ್ಲಿ ರಕ್ತ ಚಿಮ್ಮಿಸಿ ಬುಡಂದ್ಯೇನು?೧೪

ಗಡಿ ಅನ್ನುವ ಕತೆಯ ಪ್ರಮುಖ ವಿಷಯವೆ ಗಡಿ ಅದು ಪ್ರಾಣಿ ಮತ್ತು ಮನುಷ್ಯರಿಂದ ಹಿಡಿದು ಮನೆ, ಹೊಲ, ನೀರು, ಊರು, ನಾಡು, ಭಾಷೆ, ದೇಶ, ಸಂಸ್ಕೃತಿ, ಹೀಗೆ ಎಲ್ಲ ಸ್ಥರದ ಮನುಷ್ಯ ಬದುಕಿನಲ್ಲು ಇದೆ. ಆದರೆ ಈ ಕತೆಯ ಸಂದರ್ಭದಲ್ಲಿ ಗಡಿ ಎರಡು ವಿಚಾರವಾಗಿ ಚರ್ಚೆಗೆ ಮುನ್ನಲೆಗೆ ಬರುತ್ತದೆ. ಒಂದು ಹೊಲದ ವಿಚಾರವಾಗಿ ಮತ್ತೊಂದು ದೇಶದ ವಿಚಾರವಾಗಿ ಈ ಕತೆಯಲ್ಲಿ ಚರ್ಚೆ ನಡೆದಿದೆ. ಚರ್ಚೆಯಲ್ಲಿ ಭರತಪ್ಪ ಮತ್ತು ಫಕೀರಪ್ಪರ ಹೊಲದ ಕುರಿತು ಚರ್ಚೆ ನಡೆದಿದೆ ಇದೆ ಸಂದರ್ಭಕ್ಕೆ ವಿವಾದವಾಗಿರುವ ಸಮಕಾಲೀನ ರಾಜ್ಯದ ಕಾವೇರಿ ನೀರು ಹಂಚಿಕೆ ಮತ್ತು ದೇಶದ ಕಾಶ್ಮೀರದ ಗಡಿಗಳ ಸಮಸ್ಯೆಗಳ ಕುರಿತು ಅಲ್ಲಲ್ಲಿ ರೇಡಿಯೋ, ಪತ್ರಿಕೆಗಳ ಮಾಹಿತಿ ಆಧಾರಿತ ಮಾತುಗಳು ಹೋಲಿಕೆಗೆ ಬಳಕೆಯಾಗಿದೆ.'ಅಮೀನಗಡ ಕರದಂಟು' ಸ್ಥಳೀಯ ಬಳಕೆಯ ಆಹಾರದ ಕುರಿತು ಚರ್ಚೆಯಾಗಿದೆ.

'ಯುದ್ಧ ಅಂದ್ರ ಏನಂತ ತಿಳದಿದಿ... ನಮ್ಮೂರಾಗ ಗುದ್ಯಾಡಿದಂಗ ತಿಳಿದಿಯೇನು? ಚಾಕು-ಚುರಿ, ಬಡಿಗೆ-ಕಲ್ಲು ತಗಂಡು ಬಡಿದಾಡಿದಾಂಗಂತ ತಿಳಿದಿಯೇನು? ನಮ್ಮೂರು ಗುಡ್ಡದಕ್ಕಿಂತ ಹತ್ತಿಪ್ಪತ್ತು ಪಟ್ಟು ಎತ್ತರವಿರೊ

ಪರ್ವತಗಳಿಗೆ ಮಂಜು-ಹಿಮ ಮುಟ್ಟಿರತ್ತ...ಕಾಲಿಟ್ರ ಜಾರಂಗ ಇರುತ್ತ. ಅಂತದ್ರಾಗ ಅಡ್ಡಾಡಬೇಕು! ಉಣ್ಣದು ಹೆಂಗೊ-ತಂಬದು ಹೆಂಗೊ?...... ನಮ್ಮ ಶಿವಬಸವ ಹೆಂಗ ಅದ್ಯಾನೊ.. ಎಲ್ಲಿ ಅದಾನೊ?೧೫

'ನಾಲ್ಕೈದು ಮೊಳದಟು ಬಿತ್ತೊ ಹೊಲದಾಗ ಒಡ್ಡು ಹಾಕಿದ್ರ ಏನ್ ಬರುತ್ತ?'.೧೬

'ಇಲ್ಲಿ ನೋಡಾ ಭರತಪ್ಪ ಈ ಪಾಕಿಸ್ತಾನದ ಪ್ರಧಾನಿ ನವಾಜ ಷರೀಫ್ ಫೀನ ಮಸೂರ ಇಡಕಂಡು ಏನೊ ಹುಡಿಕೆಂತ ಬರಾಕ ಹತ್ಯಾನ... ಆತನ ಎದುರಿಗಿ ನಮ್ ಪ್ರಧಾನಿ ಅಟಲ್‌ಜಿ... 'ಅಲ್ಲ ಷರೀಫರೆ ನೀವು ಗಡಿ ನಿಯಂತ್ರಣ ರೇಖಾ ದಾಟಿ ೬ ಕಿಮೀ. ಬಂದಮ್ಯಾಲ ಮತ್ತೆ ನಿಯಂತ್ರಣ ರೇಖಾ ಕಾಣವಲ್ತು ಅಂತೀರಲ್ಲಾ...?೧೭

'ಭಾರತದ ವೀರ ಯೋಧರಿಗೆ ಜಯವಾಗಲಿ... ಕಾರ್ಗಿಲ್ ಕದನದಲ್ಲಿ ವೀರ ಮರಣವನ್ನಪ್ಪಿದ ಶಿವಬಸವನಿಗೆ ಜಯವಾಗಲಿ' ರಾಯಚೂರಿನ-ಮಸ್ಕಿ ಕೊಪ್ಪಳದ-ಕುಷ್ಟಗಿ, ಬಾಗಲಕೊಟ-ಅಮೀನಗಡ, ಮತ್ತು ಬೆಳಗಾವಿ೧೮

'ಈ ಕಾಶ್ಮೀರ ಸಮಸ್ಯೆ ಅಂಬೊ ಬೆಂಕೀನ ತನ್ನ ಉಡಿಯಾಗ ಹಾಕ್ಕೆಂಡು ನರಳಾಕ ಹತ್ತೈತಿ...?೧೯

ನಿನ್ನ ಆತ್ಮಕ್ಕ ಶ್ಯಾಂತಿ ಸಿಗಬೇಕಂದ್ರ ಇನ್ಮುಂದೆ ಯುದ್ದಾನ ನಡೀಬರ್ದು... ಎಲ್ಲಾರೂ ಅಣ್ಣತಮ್ಮುಗತೆ ಬದುಕ್ಬೇಕು...'೨೦

ಮೌನದ ಮರೆಯಲ್ಲಿ ಆಕಾಶದಲ್ಲಿ ಚುಕ್ಕೆಗಳು ಮಿನುಗುತೊಡಗಿದವು... ಹಾಲಿನಂಥಾ ಬೆಳದಿಂಗಳು ಚೆಲ್ಲಿ ಹೊಳೆಯುವ ಚಂದ್ರನಲ್ಲಿ ಶಿವಬಸವನನ್ನು ಕಂಡರು...೨೧

ಭರತಪ್ಪ ಅನ್ನುವ ಪಾತ್ರದ ಮಧ್ಯದಲ್ಲಿ ಗಡಿ ಮತ್ತು ಯುದ್ಧಗಳ ಚರ್ಚೆ ನಡೆದಿದೆ ಉರಲ್ಲಿ ಹೊಲದ ಒಡ್ಡುಗಳು ಜಗಳವನ್ನು ದೇಶದ ಯುದ್ಧಗಳೊಂದಿಗೆ ಹೋಲಿಕೆ ಮಾಡಲಾಗುತ್ತಿದೆ, ರಾಜ್ಯದ ನೀರಿನ ವಿವಾದಗಳ ಹಾಗೆ ಬಗೆ ಹರಿಸಲು ಬರುವುದಿಲ್ಲ ಅನ್ನವುದು ವ್ಯಂಗ್ಯಾರ್ಥವಾಗಿ ಮತ್ತು ದೇಶಗಳ ನಡುವಿನ ಜಗಳ ಮತ್ತು ಹೊಲದ ಒಡ್ಡುಗಳ ಜಗಳ ಒಂದೆ ಅಲ್ಲ ಅನ್ನವುದುರ ಅರ್ಥಗಳನ್ನು ಪಾತ್ರಗಳು ತಾವೆ ಕಂಡುಕೊಳ್ಳುತ್ತಿವೆ. ಗಡಿಯಂತ ಸಮಸ್ಯೆಗಳನ್ನ ಪರಸ್ಪರ ಕುಳಿತು ಬಗೆಹರಿಸಿಕೊಳ್ಳ ಬಹುದು ಆದರೆ ಹೊಲದ ನ್ಯಾಯಗಳು ಬಗೆ ಹರಿಯಲು ಕಾಲವಾಗುವುದು ಅನ್ನುವುದು ಅವರ ಅನುಭವ. ಅದೆ ಸಮಯದಲ್ಲಿ ಭರತಪ್ಪನ ಮಗ ಶಿವಬಸವ ಅನ್ನವುವ ಪಾತ್ರದ ಕುರಿತು ಚರ್ಚೆ ಆಗುತ್ತದೆ. ಗಡಿ ಅನ್ನುವುದು ಹಳ್ಳಿ ಒಂದರಲ್ಲಿ ಇಷ್ಟೆಲ್ಲಾ ವಿಚಾರಗಳ ಸುತ್ತ ಹರಿದಾಡುತ್ತಿದೆ. ಈ ಕಥೆಯಲ್ಲಿನ ಶಿವ ಬಸವ

ಒಬ್ಬ ಯೋಧ ಅವನ ಸ್ಥಿತಿಗಳತಗಳೇನು, ಅಲ್ಲಿ ಆಹಾರ, ನೀರು, ಅವರಿ ಕಷ್ಟದ ಸಮಯದಲ್ಲಿ ದೂರಕುವುದು ಹೇಗೆ ಅನ್ನುವ ಯೋಗಕ್ಷೇಮವನ್ನು ವಿಚಾರ ಮಾಡಯತ್ತಿದ್ದಾರೆ. ಇದೆ ಸಂದರ್ಭಕ್ಕೆ ಕಥೆಯ ಸ್ಥಳಗಳ ಪರಿಚಯವಾಗಿದೆ. ರಾಯಚೂರನ ಮಸ್ಕಿ, ಕೊಪ್ಪಳದ ಕುಷ್ಟಗಿ, ಬಾಗಲಕೊಟೆಯ ಅಮೀನಗಡ, ಮತ್ತು ಬೆಳಗಾವಿಯ ಸೈನಿಕರ ತರಬೇತಿ ಶಾಲೆಯ ಕುರಿತು ಚರ್ಚೆಯಾಗಿದೆ. ಅಷ್ಟೆ ಅಲ್ಲದೆ ಸ್ಥಳಿಯ ವಿಶೇಷತೆಗಳ ಕುರಿತು ಚರ್ಚೆಯಾಗಿದೆ.

ಗಡಿ, ಒಡ್ಡುಗಳ ಜಗಳ ಯುದ್ಧಗಳ ಚರ್ಚೆ ಸಂದರ್ಭದಲ್ಲಿ ಸೈನ್ಯದಲ್ಲಿ ವೀರಮರಣವಪ್ಪಿದ ಶಿವಬಸವನ ಹೆಣ ಊರಿಗೆ ಬಂದಾಗ ಇಡಿ ಊರಿಗೆ ಊರೆ ಜಯಕಾರ ಮೂಳುಗಿಸಿದ ಕಂಡು ಭರತಪ್ಪನ ಬದುಕು ನಶ್ವರತೆ ಕಾಡತೊಡಗುತ್ತದೆ. ಒಬ್ಬ ದೇಶಕ್ಕಾಗಿ ಪ್ರಾಣ ಮೂಡಿಪಗಿಟ್ಟ ಹೊರಾಡಿ ಮರಣವಪ್ಪಿದರೆ ನಾವುಗಲು ಹೊಲದ ಒಂದಿಷ್ಟು ಜಾಗಕ್ಕೆ ಬಡಿದಾಡಿಕೊಂಡಿದ್ದೆವೆ ಅನ್ನುವ ಮನಸ್ಥಿತಿ ಮೂಡಿ ಯುದ್ಧ ಜೀವಹಾನಿ, ಜಗಳಗಳಿಂದ ಮುಕ್ತರಾಗಿ ಬದುಕ ಬಯಸುವುದು ಕತೆಯ ಅಂತ್ಯಕ್ಕೆ ಕಾಣಿಸಿದೆ.

…ನಂದು ಜೀವಾ ಹೋದ್ರೂ ಚಿಂತಿಲ್ಲ! ಇದನ್ನ ಮಾತ್ರ ಬುಡಂಗಿಲ್ಲ... ಯಾರಿಗೂ ಕೊಡಂಗಿಲ್ಲ. ನಾನಿರತನಕಷ್ಟ ಅಲ್ಲ... ಏಳೇಳು ಜಲುಮಕ್ಕೂ ಇದು ನಮ್ದು...೧೧

ಎಲ್ಲರೂ ಕೂಡಿ ದುಡಿದು ಬರುಡು-ಬರಡಾಗಿದ್ದನ್ನ ಬಂಗಾರ-ಬಂಗಾರ ಬೆಳೆಯಾಂಗ ಮಾಡೀವಿ... ದನಗಳ ಜೊತೆ ದನಗಳಾಗಿ ದುಡಿದೀವಿ...ಬಿಸಿಲಿಗಿ ಬೆವರೀವಿ..ಛಳಿಗಿ ನಡುಗೀವಿ... ಮಳಿಯಾಗ ನೆನದೀವಿ...೧೩

ಇಲ್ಲಾ... ಅದೇನನ..ಆಗ್ಲಿ ಯಾವುನು ಮಾತು ಕೇಳಾಂಗಿಲ್ಲ. ಇಡಿ ದೇಸ್ಯಾನ ಆಳೊ ದೊರಿ ಕಾರಿನ್ಯಾಗ... ಇಮಾನದಾಗ... 'ಸುಂಇ' ಅಂತ ಬಂದು ಇಳಿದು ಇದನ್ನ ನಮುಗ ಕೊಟ್ಟುಬುಡು. ಊರಾಗೇನು ರೇಟು ನಡದಾವಲ್ಲ.. ಅದಕ್ಕಿಂತ ಹೆಚ್ಚಿನ ರೇಟು ಕೊಡ್ತೀವಿ...೧೪

'ಬ್ಯಾಡಪೊ ಸಿವುನೆ... ಇದೊಂದು ನನಗ ಶಾಸ್ವತ ಇರಂಗ ಮಾಡಿ ಬುಡು ಅಷ್ಟ ಸಾಕು...೧೫

ಮಣ್ಣು ಕತೆ ಪ್ರಾರಂಭವೆ ಮಣ್ಣು ಮತ್ತು ಮನುಷ್ಯ ಬದುಕಿನ ನಂಟಸ್ಥಿಕೆಯನ್ನು ಕುರಿತು ಧ್ವನಿಸುತ್ತದೆ. ಈ ಕತೆಯಲ್ಲಿ ಮಣ್ಣು ಬರಿ ಮಣ್ಣಾಗಿ ಕಾಣಿಸುವುದಿಲ್ಲ ಅದು ಉಸಿರಾಗಿ ನೆನಪಾಗಿರುವುದು ಕಾಣಿಸುತ್ತದೆ. ಅದೆ ಮಣ್ಣಿನಲ್ಲಿ ಬರ ಕಂಡಿರುವ ಅದೆ ಮಣ್ಣಿನಲ್ಲಿ ಅತಿಯಾಗಿ ಮಳೆಯಾಗಿ ಬೆಳೆ ನಾಶ ಕಂಡಿರುವುದು ಮತ್ತು ಅದೆ ಮಣ್ಣಿನಲ್ಲಿ ಬಾಲ್ಯದ ದಿನಗಳನ್ನು ಕಳೆದಿರವುದು ನೋವು, ನಲಿವು, ಬದುಕು ಎಲ್ಲ ತರಹದ ಅನುಭವಗಳನ್ನು ಮಾಡಿಸಿದೆ. ಅಲ್ಲದೆ

ಪ್ರಾಣಿಗಳು ಮನುಷ್ಯರಿಗೆ ಹೆಗಲು ಕೊಟ್ಟಿರುವದು ಅವುಗಳು ತಮ್ಮ ಕುಟಂಬ ಭಾಗವಾಗಿ ದುಡಿದಿರವುವುದು ಕಾಣಿಸುತ್ತದೆ. ಈಗ ಮಣ್ಣು ಕತೆಯಲ್ಲಿ ಹೊಯ್ದಾಟದಲ್ಲಿರುವ ಪಾತ್ರದ ಸಂಕಟ ಅವುಗಳನ್ನು ಕಳೆದುಕೊಳ್ಳುತ್ತಿರುವುದರ ಸೂಚಕ ತಳಮಳಗಳ ಅಭಿವ್ಯಕ್ತಿಯಾಗಿದೆ.

ತಮ್ಮಪ್ಪ ತಾನು ಸಣ್ಣವನಿದ್ದಾಗಿನಿಂದ ಇದೆ ಬನ್ನಿಗಿಡದ ಕೆಳಗ ಐದು ಬೆರಳಿನ ಆಕಾರದ ಕಲ್ಲುಗಳನ್ನು ಆರಿಸಿಕೊಂಡು ಪಂಡವರನ್ನ ಮಾಡಿ ಜ್ವಾಳದ ರವುದ್ಯಾಗ ಎಡೆ ಮಾಡಿ... ಎಳ್ಳು ಅಮಾಸಿಗೊಮ್ಮೆ ಪೂಜೆ ಮಡೋದು... ಹೊಲದ ಎಲ್ಲಾ ಮೂಲೆ-ಮೂಲೆಗೂ... ಮೊಸರನ್ನ, ಸಜ್ಜೆ ರೊಟ್ಟಿ, ಕಾಳು, ಭರ್ತ... ಒಂದ್ ಸೊಲುಪು-ಸೊಲುಪು ತಗಂಡು ಚರಗ ಚೆಲ್ಲೋದು.. ಎಲ್ಲರೂ ಚೆಂದಾಗಿ ಕುಂತು ಉಣ್ಣೋದು...ಅದೇಟು ಸಂಭ್ರಮ. ನೋಡಾಕ ಎರಡು ಕಣ್ಣು ಸಾಲಂಗಿಲ್ಲ!೨೬

ಕೃಷಿಯೊಂದಿಗಿನ ಆಚರಣೆಗಳು ಅಣ್ಣತಮ್ಮಂದಿರು ಕೂಡಿ ಬದುಕಿದ ನೆಲದ ನೆನಪುಗಳು ಭೂಮಿಯನ್ನು ತಾಯಿಯಾಗಿ ಕಂಡು ಅದಕ್ಕೆ ಚರಗ ಆಚರಣೆ ಮೂಲಕ ಆಹಾರ ಅರ್ಪಣೆ ಮಾಡುವುದು ಮತ್ತು ಕುಟುಂಬದ ಎಲ್ಲರೂ ಸೇರಿ ಒಂದೆ ಕಡೆ ಆಹಾರ ಸೇವಿಸುವುದು ಇದೆಲ್ಲವು ಅದೆ ಮಣ್ಣಲ್ಲಿ ನಡೆದುಕೊಂಡು ಬಂದಿರುವುದು ಈ ಕತೆ ವಿಶಿಷ್ಟವಾದ ನೆನಪುಗಳನ್ನು ಬಿಚ್ಚಿಕೊಳ್ಳುತ್ತದೆ.

ಮುದೇತ, ಮುದಿ, ಸಾಂತು... ನಾವು ಇರುವಿಯಂಗ ಬಾಳೇವು ಮಾಡೋದು ಕಲೀಬಕು. ಈ ರೆಕ್ಕಿ ಹುಳುಗಳಂತೆ ಅಲ್ಲಪ!'೨೭

"ಕರಿಯಾನ ಹೊಲ ನೋಡೊ/ಕರಿಯ ಕಂಬಳಿ ನೋಡೋ" ಕೈಮ್ಯಾಲೆತ್ತಿ ಹಾಡಿಕೆಂತ ಕೆಳಗ ನೋಡಿದ. ನೂರಾರು-ಸಾವಿರಾರು ಸಣ್ಣ-ಸಣ್ಣವು ನೆ ಊಣಗಳು ರೆಕ್ಕಿ ಇರೊ ಹುಳುಗಳು ನೆಲದ ಮ್ಯಾಲ ರೆಕ್ಕಿ ಹರಿದು...ತೊಯ್ದ ನೆಲಕ್ಕ ಮುತ್ತು ಕೊಡಾಕ ಹತ್ತಿದ್ವು... ಮಣ್ಣಿನ್ಯಾಗ ಮಳೆಹನಿಗೆ ಸಿಕ್ಕಿ ಬಿದ್ದಿದ್ವು! ಮುಂಜಾನೆ ಸರ್‍ಯ ಪರಮಾತುಮ ಆಗ್ಲೆ ಮೇಲೇರುತ್ತಿದ್ದ. ಗುಬ್ಬಿ-ಕಾಗಿ, ಗೊರವಂಕ-ಚಿಟಗುಬ್ಬಿ, ಮಿಡತಿ-ಸಿವನ ಕುದರಿ... ಅಕ್ಕಡಿ-ಇಕ್ಕಡಿ ಹೊಲತುಂಬಾ ಒಳ್ಳೆ ಹುರುಪಿಲೆ ಹರ‍್ಯಾಡಕ್ಹತ್ತಿದ್ವು...೨೮

ಮುದು...ಸಾಂತು ನಾವು ಮನ್ಸೇರು ಖರೆ...ಆದ್ರ ಈ ಸಣ್ಣ ಹುಳುಗಳನ್ನ ನೋಡಿ ಕಲಿಯೋದು ಭಾಳ ಐತಿ...೨೯

ಇವು ಹಿಂಗನ! ಮಳಿ-ಚಳಿಗಿ ಅಂಜಂಗಿಲ್ಲ... ಹಸಿವು ಆಗ್ಯಾದಂತೇಳಿ ಅಳಂಗಿಲ್ಲ! ಅವು ಸಾಯುತನ್ಕ ತಿನ್ನೋಟನ್ನ ಒಳಗ ನೆಲ್ದಾಗ ಕೋಣಿ-ಕೋಣಿ ಮಾಡಿದಂಗ ಮಾಡಿ ಕೂಡಿಟ್ಟರ್ತಾವ! ಅದಕಪ್ಪ ಸಾಂತು... ನಾವು ಇರುವಿಗತೆ ಬದುಕಬಕು... ಬಾಳೇವು ಮಾಡಬಕು... ಮಣ್ಣನ್ನ ನಂಬಿದ್ರ ಕೇಡು ಬರಂಗಿಲ್ಲ.೩೦

ಅಪ್ಪ ನೆನಪಾದ. ತಾನವತ್ತು ಹೊಲದಾಗ ಸಣ್ಣ-ಸಣ್ಣ ಎಕ್ಕಿ, ಜಾಲಿ ಗಿಡಗಳನ್ನು ಬಾಯಿಕೊಡ್ಲಿಲೆ ಕಡಿತಿದ್ದ...೩೧

ಮಣ್ಣಿನ ನಂಟಸ್ಥಿಕೆಯ ನೆನಪುಗಳು ಮಾತ್ರವಲ್ಲದೆ ಅಲ್ಲಿ ಬದುಕಿರುವ ಅನೇಕ ಬಗೆಯ ಸೂಕ್ಷ್ಮಜೀವಗಳ ಬದಕು ಕೃಷಿಕರಿಗೆ ಮಿತ್ರರಾಗಿ ಒಂದೊಂದು ಪಾಠ ಕಲಿಸಿರುವುದು ಒಂದೊಂದು ನೆನಪುಗಳು ಅಲ್ಲಿ ನಡೆಯುತ್ತಿರುವ ಸಂಭಾಷಣೆಯಲ್ಲಿ ಕಾಣಿಸುತ್ತವೆ ಇರುವೆ ಮತ್ತು ರೆಕ್ಕೆ ಹುಳುಗಳ ಕುರಿತು ಮಾತು ಕತೆಯಲ್ಲಿ ರೆಕ್ಕೆ ಹುಳು ಮಳೆ ಬಂದು ನಿಂತಾಗ ಸಂಜೆ ಬೆಳಕಿಗೆ ಹಂಬಲಿಸಿ ನಿಮಿಷಗಳಲ್ಲಿ ಸಾವಾಗುತ್ತವೆ ಮತ್ತು ಇರುವೆಗಳು ಹಾಗಲ್ಲ ಇರವುವೆಗಳು ಮಣ್ಣಿನೊಂದಿಗೆ ವಿಶೇಷ ನಂಟನ್ನು ಇಟ್ಟುಕೊಂಡಿವೆ ಮಣ್ಣನ್ನ ತನ್ನ ಬಾಯಿಯಿಂದ ತಂದು ಗೂಡು ಕಟ್ಟಿ ಅದೆ ಮಣ್ಣಿನಲ್ಲಿ ಆಹಾರ ಸಂಗ್ರಹಿಸಿ ಬದುಕು ನಡೆಸುತ್ತವೆ. ಆದರೆ ಮನುಷ್ಯ ಮಾತ್ರ ತನಗೆ ಕೇಡಾದಾಗ ನೋವಾದಾಗ ತಡಿಯದೆ ನೆಲವನ್ನು ಬಂಜೆಯಂದು ಮಾರಲು ಮುಂದಾಗುವ ಸ್ವಾರ್ಥ ಜೀವಿ ಅನ್ನುವ ಅರ್ಥದಲ್ಲಿ ಈ ಕತೆ ಮುಂದು ವರೆಯುತ್ತದೆ. ಈಶ್ಯಾನ್ಯ ಕರ್ನಾಟಕದ ಭಾಗದಲ್ಲಿ ಕಾಣಸಿಗುವ ಬಯಲಿನ ಪಕ್ಷಿಗಳು ಗುಬ್ಬಿ-ಕಾಗಿ, ಗೊರವಂಕ-ಚಿಟಗುಬ್ಬಿ, ಮಿಡತಿ-ಸಿವನ ಕುದರಿ... ಅಕ್ಕಡಿ-ಇಕ್ಕಡಿ ಕಾಣಿಸಿಗುತ್ತವೆ. ಅಲ್ಲದೆ ಮರಗಳು ಹೆಚ್ಚಾಗಿ ಕಂಡುಬರುವವು ಅಂದರೆ ಸಣ್ಣ ಎಕ್ಕಿ, ಜಾಲಿ ಗಿಡಿ ಇಂತಹ ಗಿಡಗಳು ಸಣ್ಣ ಕುರುಚಲುಗಳು ಮಳೆಗಾಲದ ನಂತರ ಹುಲುಸಾಗಿ ಬೆಳೆದು ಹೊಲದ ಒಡ್ಡುಗಳಿಗೆ ಚಾಚಿಕೊಂಡಿರುತ್ತವೆ. ಅವುಗಳು ಒಂದು ರೀತಿಯ ಬೇಲಿಗಳಾಗಿ ಬಳಕೆಯಾಗುತ್ತವೆ ಮುತ್ತು ಹೆಚ್ಚಾಗಿ ಬೆಳದರೆ ನೆಲದ ನೀರಿನ ಪ್ರಮಾಣವನ್ನು ತಗ್ಗಿಸುತ್ತವೆ ಅನ್ನುವ ಕಾರಣಕ್ಕೆ ಅವುಗಳನ್ನು ಹೊಲಗಳ ಸುತ್ತಲು ಬೆಳೆಯಲು ಬಿಡುವುದಿಲ್ಲ. ಕತೆಗಾರನ ಗ್ರಹಿಕೆಗೆ ನಿಲುಕುವ ಎಲ್ಲ ಅಂಶಗಳನ್ನು ಮತ್ತು ರೂಪಕವಾಗಿ ಇವರುವೆ ಬದುಕು ಮನುಷ್ಯನಿಗೆ ಆದರ್ಶ ಆಗಬೇಕು ಅನ್ನುವಲ್ಲಿ ಪಾತ್ರಗಳನ್ನು ಮಾತನಾಡಿಸವುದು ಕಾಣಿಸುತ್ತದೆ.

ಇನ್ಮ್ಯಾಲ ನೀನೆನಪ ನಮ್ಮೂರನ್ನ ಬುಟ್ಟು ರೈಚೂರಾಗ ರ್‍ತಿರಂತಲ್ಲಪೊ...೩೨

"ಥೂ...ಇವನೌನನಾಡ ಆ ಸುಡುಗಾಡು ಪ್ಯಾಕ್ಟರಿ ಯಾವನಿಗಿ ಬೇಕಾಗ್ಯೆತಿ, ಲಾಭ ರ್‍ತೈತಿ ಅಂತೇಳಿ ಹೊಲಾನೆಲ್ಲಾ ಮಾರಾಕ ಆಗ್ತಾತೇನು? ೩೩

"ಅಲ್ಲಪ! ಸಾಂತಪ್ಪಣ್ಣ... ನಮ್ಮೂರಾಗ ನಾಲ್ಕೈದು ಮಂದಿ ನಮ್ಮೂರು ಅಡವ್ಯಾಗಿನ ಹೊಲಾ-ಮನೀನ ಮರ್ಕಂಡು ದೊಡ್ಡೂರಾಗ ಪ್ಲಾಟ್ ತಗಂಡು ಮನಿ ಕಟ್ಟಿಸಿ... ಉದ್ಯೋಗ ಮಾಡಾಕ ಹತ್ಯಾರಲ್ಲ. ಅವ್ರು ಈ ಮಣ್ಣನ್ನು ನಂಬಕೊಂಡ ಕುಂತಾರ ಏನು? ಇಲ್ಲ ಅವ್ರೆಲ್ಲಾ ಸತ್ತುಬುಟ್ಟರಾ?" ೩೪

ಇಡಿಯಾಗಿ ನೆನಪುಗಳು ಊರು ಹೊಲಗಳ ಸುತ್ತಲೂ ಪ್ರಾಣಿಗಳ ಸುತ್ತಲು ಮತ್ತು ಸೂಕ್ಷ್ಮಜೀವಗಳ ಸುತ್ತಲು ತಿರುಗಿ ಈಗ ಕೊನೆಗೆ ದುರಂತೆತೆಯಡೆಗೆ ಸಾಗುವ ಹಾಗೆ ಕತೆ , ಸಾಂತಪ್ಪ ಅನ್ನುವ ರೈತನ ಭವನೆಗಳು ಅದೆ ಕಾಲಕ್ಕೆ ಹೊಲಗಳು ಬೀಳು ಬಿದ್ದಿರುವುದು ಅದೆ ಸಂದರ್ಭದಲ್ಲಿ ಕೈಗಾರಿಕೆಗಳಿಗಾಗಿ ಹೊಲಗಳನ್ನು ಖರೀದಿಗೆ ಕೇಳುವುದು ಇವೆಲ್ಲದರ ನಡುವೆ ಮಗನ ಜೊತೆ ಹೊಲ ಊರು ಮನಿ ಬಿಟ್ಟು ನಗರಕ್ಕೆ ಹೋಗಲೆಬೇಕೆಂದು ವತ್ತಾಯಗಳು ರೈತ ಶಾಂತಪ್ಪನ್ನು ಇಕ್ಕಟ್ಟಿಕೆ ಹಾಕಿವೆ. ಇಂತಹದೆ ಕತೆಗಳು ಈ ಬಿಸಿಲು ಬಾಗಿನ ಕಥಾ ಸಂಕಲನದಲ್ಲಿ ಅನೇಕ ಇವೆ. ಅವು ಎರಡು ದಶಕದ ದುರಂತಮಯ ಕತೆಗಳನ್ನು ಹೇಳುತ್ತವೆ.

'ಮಳಿ ಬಂತಂದ್ರ ಮುಗೀತಿ. ಮನಿ ಅಂಬುದು ಜರಡಿಗತೆ ಸೋರುತ್ತ. ನಮ್ ಬದುಕು ನೀರಾಗ ತೇಲುವಂಗ ಆಗುತ್ತ. ಹೊರಗ 'ಗದಾ ಗದಾ' ನಡುಗೋ ಚಳಿಯಿದ್ರೂ ಹೊಟ್ಟಿ ಒಳಗ ಕತ ಕತ ಕುದಿ ಸುರುವಾಗುತ್ತ' ೩೫

ಸಿಡ್ಲು ಸುರುವಾಗ್ತಿದ್ವು. ಹೊರಗ ಅಂಗಳದಾಗ ಒಂದೊಂದೆ ಹನಿ ಮಳಿ ಬಿದ್ರ ಆಕಿ ಕಣ್ಣಾಂಗ್ನಿಂದ ಒಂದೊಂದು ಹನಿ ಕಣ್ಣೀರು ತೊಯ್ದು ನೆಲಕ್ಕ ಬಿದ್ದು ತೂತು ಮಾಡ್ತಿದ್ವು.. ೩೬

ಅಲ್ಲ ಮಾರಾಯ್ತಿ ಮಳಿಯನ ನಿಲ್ಲಲಿ ತಡಿ. ಈಗ ಹೋದ್ರೂ ಯಾರ ಬಣವ್ಯಾಗ ಒಣ ಹುಲ್ಲು ಸಿಗುತ್ತ? ೩೭

ಈ ಭಾಗದಲ್ಲಿ ಬಿಸಿಲು ಬರಗಾಲ ಏಷ್ಟು ಭೀಕರತೆಯನ್ನು ಉಂಟುಮಾಡುತ್ತದೆಯೊ ಅದಕ್ಕಿಂತ ಹೆಚ್ಚು ಮಳೆ ನಷ್ಟ ಉಂಟುಮಾಡುತ್ತದೆ. ಇಲ್ಲಿ ಬರುವ ಎಲ್ಲ ಕತೆಗಳಲ್ಲಿ ಮಳೆಯ ಕುರಿತು ಇಗಾಗಲೆ ಚರ್ಚೆ ಮಾಡಿರುವುದು ಇದೆ ಇಲ್ಲಿ ಭೌಗೋಳಿಕ ಕಾರಣಕ್ಕೆ ಉಂಟಾಗುವ ಮಳೆ , ಬಿಸಿಲು ಇವು ಉಂಟುಮಡುತ್ತಿರುವ ದುರಂತಗಳು ಬದುಕಿನ ಮೇಲೆ ದುಷ್ಪರಿಣಾಮ ಬಿರಿದೆ ಈ ಕತೆಯ ಪ್ರಾರಂಭದಲ್ಲಿ ಮಳೆ ಅನ್ನುವುದು ಯಾಕ ಆದರು ಬರುತ್ತೆ ಅನ್ನುವ ರೀತಿಯಲ್ಲಿ ಇದೆ. ಇಲ್ಲಿ ಬದುಕು ನಡೆಸುವ ಎಲ್ಲರೂ ಒಂದೆ ತೆರನಾಗಿ ಆರ್ಥಿಕತೆಯನ್ನು ಹೊಂದಿಲ್ಲಾ ಭೀಕರತೆ ಉಂಟಾದಾಗ ದನಕರುಗಳಿಗೆ ಮೇವು ಇಲ್ಲದಿರವುದು. ಮನುಷ್ಯರಿಗೆ ಆಹರ ದೊರಕದಿರವುದು. ಈ ಕತೆ ಪ್ರಧಾನವಾಗಿ ಕಾಣಿಸುತ್ತದೆ. ಬೆಸಿಗೆಯಲ್ಲಿ ಇಂತಹದೆ ಕತೆ ನೀರು ಸಿಗದೆ ಇರವುದು. ಬೆಳೆ ಇಲ್ಲದೆ ಸಾಲದಲ್ಲಿ ಬದುಕು ದೂಡವುದು ಕಾಣಿಸುತ್ತದೆ.

ಹೋದ ವರ್ಷ ಬೀಜದ ರೊಕ್ಕ ಸಮೇತ ಕೈಗೆ ಬರಲಿಲ್ಲ. ಬೀಜ, ಗೊಬ್ಬರಕ್ಕ ಊರ ಫೈನಾನ್ಸ್ ಮಾಲೀಕ ನಾಗರಾಜನತಲ್ಲಿ ೬ ರೂಪಾಯಿ ಬಡ್ಡಿಗೆ ತಂದಿದ್ದ ೨ ಸಾವಿರ ರೂಪಾಯಿ ತೀರಿಸಾಕ ವರ್ಷದಿಂದಲೂ ಅವರ ಹೊಲದಲ್ಲಿ ದುಡದ್ರು ಮುಟ್ಟಿದ್ದಿಲ್ಲ...!೩೮

ಬೆಂಗಳೂರಿಗೆ ಹೋದ ಬ್ಯಾಸಗಿಗೆ ದುಡಿಯಾಕ ಹೋದವರು ಊರ ಕಡೆ ಅಣಿಕಿಹಾಕಿರಲಿಲ್ಲ.೩೯

ಕಳೆದ ಮೂರು ವರ್ಷಗಳಿಂದಲೂ ಹೊತ್ತಿಗೆ ಸರೀಗಿ ಮಳೆ ಬರಲರ್ದ ಬೆಳೆ ಬಂದಿರಲಿಲ್ಲ.೪೦

"ಹೀಂಗ ಗೌರಮ್ಮನ ಮನ್ಯಾಗ ಇರೊ ಗಡಿಗಿ ಒಳಗ ಉದ್ದು, ಹೆಸರು, ಮೆಟಗಿ, ಮೆಂತ್ಯೆ, ಬೆಂಡೆ, ಮೆಣಸು, ಶೇಂಗಾ, ಹಲಸಂದಿ, ಬುಡುಮೆ, ಸೌತೆ ಹೀಗೆ ನಾನಾ ನಮೂನಿ ಬೀಜಗಳನ್ನು ಒಂದೂ ಪ್ಲಾಸ್ಟಿಕ್ ಕವರಿನಲ್ಲಿ ಕಟ್ಟಿ ಜ್ವಾಪಾನವಾಗಿ ಇಟ್ಟಿರುತ್ತಿದ್ದಳು"೪೧

ಅವನು ಮಲ್ಲಪ್ಪ ನಮ್ ಬಣವಿಲಿಂದ ಹುಲ್ಲು ಕದ್ದು ಹೊರಿಕಟಿಗೆಂಡು ಹೋಗಾಕ ಹತ್ತಿದ್ದ.೪೨

ಕತೆ ಮಳೆಯ ಕುರಿತು ಮಾತನಾಡುತ್ತ ಮಳೆ ಆಗದೆ ಇರುವ ವರ್ಷಗಳ ಕುರಿತು ಹೇಳುತ್ತಿದೆ. ಮೂರು ವರ್ಷಗಳಷ್ಟು ಕಾಲ ಉಂಟಾದ ಬರಗಾಲದಲ್ಲಿ ಆಗಿರುವ ಸಾಲಕ್ಕೆ ರೈತರು ಮತ್ತು ಕೃಷಿ ಆದರಿಸಿ ದುಡಿಯುವ ಜನವರ್ಗಗಳ ಗೂಳೆ ಕಥನಗಳ ಹಿಂದಿರುವ ವೈಪರಿತ್ಯಗಳ ಕುರಿತು ಕತೆ ಎಳೆ ಎಳೆಯಾಗಿ ಬಿಚ್ಚಿದೆ. ಇಲ್ಲಿನ ರೈತರು ದುಡಿಯುವವರ ಬದುಕು ನಿಜವಾಗಿಯು ಮಳೆ ಬಿಸಿಲಿನೊಂದಿಗಿನ ಜೂಜಾಟವೇ ಆಗಿ ಕಾಣಿಸಿಕೊಳ್ಳುತ್ತವೆ. ಅಲ್ಲದೇ ಸಂಗ್ರಹಿತ ಭೀಜಗಳ ಕುರಿತು ಮಾಹಿತಿ ಇದೆ ಉದ್ದು, ಹೆಸರು, ಮೆಟಗಿ, ಮೆಂತ್ಯೆ, ಬೆಂಡೆ, ಮೆಣಸು, ಶೇಂಗಾ, ಹಲಸಂದಿ, ಬುಡುಮೆ, ಸೌತೆ ಇಂತಹ ಬೆಳೆಗಳು ಸಿರಿಧಾನ್ಯಗಳನ್ನು ಇಲ್ಲಿನ ಮಣ್ಣಿಗೆ ಬೆಳೆದು ಅವುಗಳಲ್ಲಿ ಭೀಜಗಳಿಗಾಗಿ ಮಡಿಕೆಗಳಲ್ಲಿ ಸಂರಕ್ಷಿಸಿ ಉಳಿಸಿಕೊಳ್ಳಲಾಗುತ್ತದೆ.

ಒಟ್ಟಾರೆಯಾಗಿ ಇಲ್ಲಿನ ಪ್ರತಿಯೊಂದು ಕತೆಗಳು ಮಳೆ, ಬಿಸಿಲು, ಮಣ್ಣು, ಇವುಗಳ ಅಂಶಗಳೆ ಪ್ರಧಾನವಾಗಿದ್ದು ಮನುಷ್ಯ ಬದುಕಿನ ಜೊತೆ ಅವುಗಳ ಪರೀಕ್ಷೆಗಳು ಇವೆ. ಕತೆಗಾರ ಕಲ್ಲಿಗನಾಥರ ಸೂಕ್ಷ ್ಮನೋಟಕ್ಕೆ ಸಿಗದೆ ಇರುವ ವಸ್ತು ಸಂಗತಿಗಳೆ ಇಲ್ಲ ಅನ್ನುವ ರೀತಿಯಲ್ಲಿ ಕತೆಗಳು ಕತೆಗಳ ಹೆಣಿಕೆ ಇದೆ. ಆದರೆ ಎಲ್ಲ ಕತೆಗಳ ಪ್ರಾರಂಭ ಮತ್ತು ಅಂತ್ಯ ಎರಡು ಹೀಗೆ ಇರಬೇಕು ಅನ್ನುವ ಮನಸ್ಥಿತಿಯೊಂದು ಅವರಿಗೆ ಹಿಂದಿನ ಕತೆಗಾರರಿಂದ ಬಂದಿರುವ ಬಳುವಳಿಯಾಗಿರಬಹುದು. ಹೊಸ ಬಗೆಯ ಸಂವೇದನೆಗಳಿರುವ ಕಥಾ ಹೆಣಿಕೆಯಲ್ಲಿ

ಹೊಸ ಮಾರ್ಗದ ಅಗತ್ಯತೆ ಇದೆ ಅನ್ನಸುತ್ತದೆ. ಅಂದರೆ ಕತೆಯ ಪ್ರಾರಂಭ ಮಧ್ಯಮ, ಅಂತ್ಯಗಳು ಬದಲಾಗಬೇಕು ಅನ್ನಿಸುತ್ತದೆ.

**ಕೊನೆಯ ಟಿಪ್ಪಣಿಗಳು**

೧)ಮತಾಂತರ- 'ಕೆರೆ' ಪುಟ ಸಂ ೬೯.
೨) ಅದೆ ಕತೆ ಪುಟ ಸಂ ೭೦.
೩) ಅದೆ ಕತೆ ಪುಟ ಸಂ ೭೩.
೪) ಅದೆ ಕತೆ ಪುಟ ಸಂ-೭೩.
೫) ಅದೆ ಕತೆ ಪುಟ ಸಂ ೭೫.
೬) ಅದೆ ಕತೆ ಪುಟ ಸಂ ೭೮.
೭) ಅದೆ ಕತೆ ಪ ಸಂ ೭೯.
೮) ಅದೆ ಕತೆ ಪು ಸಂ ೮೦.
೯) ಉಡಿಯಲ್ಲಿ ಉರಿ- ಗಡಿ ಕತೆ ಪುಟ ಸಂ ೧೬೩.
೧೦) ಅದೆ ಕತೆ ಪುಟ ಸಂ ೧೬೩.
೧೧) ಅದೆ ಕತೆ ಪುಟ ಸಂ ೧೬೩.
೧೨) ಅದೆ ಕತೆ ಪು ಸಂ ೧೬೪.
೧೩) ಅದೆ ಕತೆ ಪು ಸಂ ೧೬೪.
೧೪) ಅದೆ ಕತೆ ಪು ಸಂ ೧೬೬.
೧೫) ಅದೆ ಕತೆ ಪು ಸಂ. ೧೬೭.
೧೬) ಅದೆ ಕತೆ ಪು ಸಂ. ೧೬೮.
೧೭) ಅದೆ ಕತೆ ಪು ಸಂ. ೧೭೨.
೧೮) ಅದೆ ಕತೆ ಪು ಸಂ. ೧೭೨.
೧೯) ಅದೆ ಕತೆ ಪು ಸಂ. ೧೭೯.
೨೦) ಅದೆ ಕತೆ ಪು ಸಂ. ೧೮೦.
೨೧)ಅದೆ ಕತೆ ಪು ಸಂ. ೧೮೦.
೨೨) ಉಡಿಯಲ್ಲಿ ಉರಿ- ಮಣ್ಣು ಕತೆ. ಪು ಸಂ ೧೮೧.
೨೩) ಅದೆ ಕತೆ ಪು ಸಂ.೧೮೧.
೨೪) ಅದೆ ಕತೆ ಪು ಸಂ.೧೮೨.
೨೫) ಅದೆ ಕತೆ ಪು ಸಂ. ೧೮೨.
೨೬) ಅದೆ ಕತೆ ಪು ಸಂ. ೧೮೩.
೨೭) ಅದೆ ಕತೆ ಪು ಸಂ. ೧೮೩.

೧೮) ಅದೆ ಕತೆ ಪು ಸಂ. ೧೮೫.

೧೯) ಅದೆ ಕತೆ ಪು ಸಂ. ೧೮೫.

೨೦) ಅದೆ ಕತೆ ಪು ಸಂ. ೧೮೫.

೨೧) ಅದೆ ಕತೆ ಪು ಸಂ. ೧೮೬.

೨೨) ಅದೆ ಕತೆ ಪು ಸಂ. ೧೮೯.

೨೩) ಅದೆ ಕತೆ ಪು ಸಂ. ೧೯೦.

೨೪) ಅದೆ ಕತೆ ಪು ಸಂ. ೧೯೧.

೨೫) ಮಾಮೂಲಿ ಗಾಂಧಿ- ಮಳೆ ಕತೆ ಪು ಸಂ ೨೬೦

೨೬) ಅದೆ ಕತೆ ಪು ಸಂ. ೨೬೦.

೨೭) ಅದೆ ಕತೆ ಪು ಸಂ. ೨೬೧.

೨೮) ಅದೆ ಕತೆ ಪು ಸಂ.೨೬೧.

೨೯) ಅದೆ ಕತೆ ಪು ಸಂ. ೨೬೨.

೪೦) ಅದೆ ಕತೆ ಪು ಸಂ. ೨೬೨.

೪೧) ಅದೆ ಕತೆ ಪು ಸಂ. ೨೬೪.

೪೨) ಅದೆ ಕತೆ ಪು ಸಂ. ೨೬೮.

ಆಕರ ಗ್ರಂಥಗಳು

ಬಿಸಿಲ ಬಾಗಿನ ಎರಡು ದಶಕದ ಕಥನ, ಕಲ್ಲಿಗನಾಥ ಗುಡದೂರು, ಅಂಬಾರಿ ಪ್ರಕಾಶನ ಮೈಸೂರು ನಂ ೭೭, ಕುಮಾರವ್ಯಾಸ ರೋಡ, ಈಶ್ವರಯ್ಯಾ ನಗರ, ಕುವೆಂಪು ನಗರ ಮೈಸೂರು.-೨೩ ಮೋಬೈಲ್ ನಂಬರ ೯೮೪೫೮೯೦೩೫೩.